# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **557**
ಸದಸ್ಯರ ಹೆಸರು : ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 09-03-2026
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಇಂಧನ ಇಲಾಖೆಯು 2024 25 ನೇ ಸಾಲಿನಲ್ಲಿ ಎಷ್ಟು ವಿದ್ಯುತ್ ಪರಿವರ್ತಕ (ಟ್ರಾನ್ಸ್ ಫಾರ್ಮರ್) ಖರೀದಿಗಾಗಿ ಎಷ್ಟು ಮೊತ್ತ ಹಾಗೂ ಯಾವ ಸಂಸ್ಥೆಯ ಪರವಾಗಿ 4ಜಿ ವಿನಾಯಿತಿ ಪಡೆಯಲಾಗಿತ್ತು, ಸದರಿ ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಗಳನ್ನು ಯಾವಾಗ ಖರೀದಿಸಲಾಗಿದೆ; (ಮಾಹಿತಿ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ 2024-25ನೇ ಸಾಲಿನಲ್ಲಿ 4ಜಿ ವಿನಾಯಿತಿ ಪಡೆಯಲಾಗಿದ್ದು ಕವಿಕಾ ಸಂಸ್ಥೆಯಿಂದ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳನ್ನು **ಅನುಬಂಧ -1** ರಲ್ಲಿ ಒದಗಿಸಲಾಗಿದೆ. |
| ಆ) | ಕವಿಕ (ಕರ್ನಾಟಕ ವಿದ್ಯುತ್ ಕಾರ್ಖಾನೆ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ) ಯಿಂದ 11721 ವಿದ್ಯುತ್ ಪರಿವರ್ತಕ (ಟ್ರಾನ್ಸ್‌ಫಾರ್ಮರ್) ಗಳನ್ನು ಖರೀದಿಸದೆ ರೂ.174.73 ಕೋಟಿ ನೀಡಿ ಕೇರಳ ಸರ್ಕಾರದ ಅಧೀನ ಸಂಸ್ಥೆ (ಕೇರಳ ಎಲೆಕ್ಟ್ರಿಕ್ ಮತ್ತು ಎಲೈಡ್ ಕಂ) ಯಿಂದ ಖರೀದಿಸುವ ಸಲುವಾಗಿ 4ಜಿ ವಿನಾಯಿತಿ ಪಡೆಯಲು ಅನುಸರಿಸಿರುವ ಕ್ರಮಗಳೇನು: (ವಿವರ ನೀಡುವುದು) | ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಕೇರಳ ಎಲೆಕ್ಟ್ರಿಕಲ್ & ಅಲೈಡ್ ಇಂಜಿನಿಯರಿಂಗ್ ಕೋ ಲಿಮಿಟೆಡ್, (KEL) ನಿಂದ ಯಾವುದೇ ಪರಿವರ್ತಕಗಳನ್ನು ಖರೀದಿಸಿರುವುದಿಲ್ಲ.<br>ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಅವಶ್ಯವಿರುವ ಪರಿವರ್ತಕಗಳನ್ನು ಟೆಂಡರ್ ಮುಖಾಂತರ ಹಾಗೂ 4ಜಿ ವಿನಾಯಿತಿ ಪಡೆಯಲಾದ ಕವಿಕಾ ಸಂಸ್ಥೆಯಿಂದ ಖರೀದಿಸಲಾಗಿರುತ್ತದೆ.<br>ಮುಂದುವರೆದು, 4ಜಿ ವಿನಾಯಿತಿ ಪಡೆಯಲು ಅನುಸರಿಸುವ ಕ್ರಮಗಳ ವಿವರಗಳು ಕೆಳಕಂಡಂತಿವೆ:<br>➢ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇಂಧನ ಇಲಾಖೆಗೆ 4ಜಿ ವಿನಾಯಿತಿಗೆ ಅರ್ಜಿ ಸಲ್ಲಿಸುತ್ತಾರೆ. 4ಜಿ ವಿನಾಯಿತಿ ದೊರೆತ ನಂತರ ಪರಿವರ್ತಕಗಳನ್ನು ಸರಬರಾಜು ಮಾಡಲು ಆದೇಶ ನೀಡುವಂತೆ ಕೋರಿ ವಿದ್ಯುತ್ ಸರಬರಾಜು ಕಂಪನಿಗಳಿಗೆ ಪತ್ರಗಳನ್ನು ಸಲ್ಲಿಸುತ್ತಾರೆ.<br>➢ ವಿದ್ಯುತ್ ಸರಬರಾಜು ಕಂಪನಿಗಳು ಕಾಮಗಾರಿಗಳಿಗೆ ಬೇಕಾಗುವ ಪರಿವರ್ತಕಗಳ ಬೇಡಿಕೆಗನುಗುಣವಾಗಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಪರಿವರ್ತಕಗಳನ್ನು ಸರಬರಾಜು ಮಾಡಲು ಖರೀದಿ ಆದೇಶ ನೀಡುತ್ತಾರೆ. |
| ಇ) | ಕೇರಳ ರಾಜ್ಯದ ಚುನಾವಣಾ ವೆಚ್ಚ ಸರಿದೂಗಿಸುವ ನಿಟ್ಟಿನಲ್ಲಿ ಕೇರಳ ರಾಜ್ಯದ ಸಂಸ್ಥೆಯಿಂದ ಖರೀದಿಸುತ್ತಿರುವುದಾಗಿ ಸಾರ್ವಜನಿಕ ವಲಯದಲ್ಲಿ ಚರ್ಚೆಗಳಾಗುತ್ತಿದ್ದು ಈ ಕುರಿತು ಸರ್ಕಾರವ ನಿಲುವೇನು | ಆಧಾರ ರಹಿತವಾದುದ್ದು. |

| | | |
|---|---|---|
| ಈ) | ಅನ್ಯ ರಾಜ್ಯದಿಂದ ವಿದ್ಯುತ್ ಪರಿವರ್ತಕ (ಟ್ರಾನ್ಸ್ ಫಾರ್ಮರ್) ಗಳನ್ನು ಖರೀದಿಸುವುದೇ ಆಗಿದ್ದಲ್ಲಿ, ಈ ಕುರಿತು ಟೆಂಡರ್ ಕರೆಯದಿರಲು ಕಾರಣಗಳೇನು? (ವಿವರಗಳನ್ನು ಆಗಿದ್ದಲ್ಲಿ ಒದಗಿಸುವುದು) | ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಪರಿವರ್ತಕಗಳನ್ನು ಟೆಂಡರ್ ಮುಖಾಂತರ ಹಾಗೂ 4ಜಿ ವಿನಾಯಿತಿ ಪಡೆಯಲಾದ ಕವಿಕಾ ಸಂಸ್ಥೆಯಿಂದ ಖರೀದಿಸಲಾಗಿರುತ್ತದೆ.<br><br>ಮುಂದುವರೆದು, ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಟೆಂಡರ್ ಮೂಲಕ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳನ್ನು **ಅನುಬಂಧ -2 ರಲ್ಲಿ** ಒದಗಿಸಲಾಗಿದೆ. |

ಸಂಖ್ಯೆ: ಎನರ್ಜಿ 55 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್. ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ557ಕ್ಕೆ ಅನುಬಂಧ-1

### ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ 4ಜಿ ವಿನಾಯಿತಿ ಪಡೆಯಲಾಗಿದ್ದ ಸಂಸ್ಥೆಯಿಂದ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳು

| ಕ್ರ. ಸಂ. | ವಿದ್ಯುತ್ ಸರಬರಾಜು ಕಂಪನಿಯ ಹೆಸರು | 2024-25ನೇ ಸಾಲಿನಲ್ಲಿ 4ಜಿ ವಿನಾಯಿತಿ ಪಡೆಯಲಾಗಿದ್ದ ಸಂಸ್ಥೆಯಿಂದ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳು | | | |
|---|---|---|---|---|---|
| | | ಸಂಸ್ಥೆಯ ಹೆಸರು | ಪರಿವರ್ತಕಗಳ ಸಂಖ್ಯೆ | ಖರೀದಿಯ ಮೊತ್ತ ರೂ.ಕೋಟಿಗಳಲ್ಲಿ | ಖರೀದಿ ಆದೇಶಗಳ ದಿನಾಂಕ |
| 1 | ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | ಮೆ\|\| ಕವಿಕಾ ನಿಯಮಿತ ಬೆಂಗಳೂರು | 2,500 | 30.24 | 01.10.2024 |
| | | | 75 | | 12.02.2025 |
| 2 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | ಮೆ\|\| ಕವಿಕಾ ನಿಯಮಿತ ಬೆಂಗಳೂರು | 100 | 1.02 | 15.01.2025 |
| | | | 360 | 6.27 | 25.02.2025 |
| 3 | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | ಮೆ\|\| ಕವಿಕಾ ನಿಯಮಿತ ಬೆಂಗಳೂರು | 1,000 | 17.72 | 30.10.2024 |
| 4 | ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | - | - | - | - |
| 5 | ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | ಮೆ\|\| ಕವಿಕಾ ನಿಯಮಿತ ಬೆಂಗಳೂರು | 2,500 | 39.44 | 22.10.2024 |
| | | | 3,000 | 46.83 | 18.03.2025 |

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎನ್.ರವಿಕುಮಾರ್. ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ557ಕ್ಕೆ ಅನುಬಂಧ-2**

**ವಿದ್ಯುತ್ ಸರಬರಾಜು ಕಂಪನಿಗಳಲ್ಲಿ 2024-25ನೇ ಸಾಲಿನಲ್ಲಿ ಟೆಂಡರ್ ಮೂಲಕ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳು**

| ಕ್ರ. ಸಂ. | ವಿದ್ಯುತ್ ಸರಬರಾಜು ಕಂಪನಿಯ ಹೆಸರು | 2024-25ನೇ ಸಾಲಿನಲ್ಲಿ ಟೆಂಡರ್ ಮೂಲಕ ಖರೀದಿ ಮಾಡಿರುವ ಪರಿವರ್ತಕಗಳ ವಿವರಗಳು | |
|---|---|---|---|
| | | ಪರಿವರ್ತಕಗಳ ಸಂಖ್ಯೆ | ಖರೀದಿಯ ಮೊತ್ತ ರೂ.ಕೋಟಿಗಳಲ್ಲಿ |
| 1 | ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | 8950 | 89.86 |
| 2 | ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | 3634 | 47.52 |
| 3 | ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | 3700 | 52.98 |
| 4 | ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | - | - |
| 5 | ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ | - | - |